

# ದೆನಾಲಿ
## ಎಂಬ ಅದ್ಭುತ ಲೋಕ

ಡಾಲ್‌ಶೀಪ್, ಮೂಸ್, ವಿಲಕ್ಷಣ ಗ್ರಿಸ್ಲಿ ಕರಡಿ, ವಿಲ್ಲೊ ಟರ್ಮಿಗಾನ್– ಈ ಮನಮೋಹಕ ರಾಷ್ಟ್ರೀಯ ಉದ್ಯಾನದಲ್ಲಿ ಅದೆಷ್ಟೊಂದು ಪ್ರಾಣಿ, ಪಕ್ಷಿಗಳು!

■ ಚಿತ್ರ– ಲೇಖನ:
**ಕೆ.ವಿಟ್ಟಲ್‌ದಾಸ್ ಭಟ್**





ಎಸ್ಕಿಮೋ ಜನಾಂಗ ಮುಖ್ಯ ವಾಹಿನಿಯಲ್ಲಿ ಸೇರಿ ಹೋಗಿದೆ. ಆದರೆ ಅವರು ಒಂದು ಕಾಲದಲ್ಲಿ ಚಳಿಗಾಲಕ್ಕೆ ಬೇಟೆಯಾಡುತ್ತಿದ್ದ, ಇಗ್ಲೂ ಎಂಬ ಮನೆಗಳನ್ನು ಕಟ್ಟಿ ಕೊಳ್ಳುತ್ತಿದ್ದ ಪ್ರದೇಶವನ್ನು ನೋಡುವ ಕುತೂಹಲದಿಂದ ಅಲಾಸ್ಕಾ ದಲ್ಲಿರುವ ದೆನಾಲಿ ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ ನೀಡಿದೆ.

ಈ ಉದ್ಯಾನದಲ್ಲಿ ಉತ್ತರ ಅಮೆರಿಕಾದಲ್ಲೇ ಅತಿ ಎತ್ತರದ ದೆನಾಲಿ ಪರ್ವತ ಶಿಖರವಿದೆ. ಹಿಮ ಸಾರಂಗಗಳೂ, ಮೂಸ್ ಕಡವೆಗಳೂ, ಗ್ರಿಜ್ಲಿ ಕರಡಿಗಳೂ ಇಲ್ಲಿ ಸ್ವಚ್ಛಂದವಾಗಿ ತಿರುಗುತ್ತವೆ.

ದೆನಾಲಿ ರಾಷ್ಟ್ರೀಯ ಉದ್ಯಾನ ತಲುಪಲು ಆಂಕರೆಜ್‌ನಿಂದ 400 ಕಿ.ಮೀ. ರೈಲು ಅಥವಾ ಬಸ್ಸಿನಲ್ಲಿ ಪ್ರಯಾಣ ಮಾಡಬೇಕು. ಕೆಲವು ಟ್ರಾವೆಲ್ ಕಂಪೆನಿಗಳಲ್ಲಿ ಪ್ಯಾಕೇಜ್ ತೆಗೆದುಕೊಂಡರೆ, ಸಂಪೂರ್ಣ ಪಾರದರ್ಶಕ ಮಹಡಿಯಿರುವ ವಿಶೇಷ ರೈಲುಗಳಲ್ಲಿ ಪಯಣಿಸಬಹುದು. ಸುಮಾರು 9 ರಿಂದ 10 ಗಂಟೆಗಳ ಕಾಲ ಈ ಪುಟ್ಟ ರೈಲಿನಲ್ಲಿ ಪ್ರಯಾಣ ಮಾಡುವಾಗ ಕಣ್ಣು ಹಾಯಿಸಿದಲ್ಲೆಲ್ಲ ಕಾಡು, ಸುಂದರ ಸರೋವರಗಳು, ವಿಸ್ತಾರವಾದ ನದಿಗಳು, ಮೈ ಜುಮ್ಮೆನ್ನಿಸುವ ಆಳ ಪ್ರಪಾತಗಳು!

ದೆನಾಲಿ ಒಂದು ತಾತ್ಕಾಲಿಕ ಪೇಟೆ. ಬೇಸಿಗೆಯಲ್ಲಿ ಪ್ರವಾಸಿಗರಿಂದ ತುಂಬಿ ತುಳುಕುತ್ತದೆ. ನಾವು ಹೋದಾಗಲೂ  ಬೇಸಿಗೆಯಿತ್ತು. ಆದರೂ ಸಂಜೆ ಮೈ ನಡುಗಿಸುವಷ್ಟು ಚಳಿ. ದೆನಾಲಿಯಿಂದ 136 ಕಿ.ಮೀ.ದೂರವಿದ್ದ, ಎಸ್ಕಿಮೋಗಳು ಒಂದು ಕಾಲದಲ್ಲಿ ಅಲೆದಾಡುತ್ತಿದ್ದ ತಂದ್ರ ಪ್ರದೇಶದ ಮೂಲಕ ಹಾದು ಹೋಗುತ್ತಿದ್ದ, ಕಾಡು ಪ್ರಾಣಿಗಳು ಸ್ವಚ್ಛಂದವಾಗಿ ತಿರುಗಾಡುವ ವಂಡರ್ ಲೇಕ್ ಟ್ರಿಪ್ ಅನ್ನೇ ನಾವು ಆಯ್ಕೆ ಮಾಡಿಕೊಂಡೆವು. ನಿರ್ದಿಷ್ಟ